ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

3

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19 - 2ನೇ ಅಲೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ವಾಣಿ     ದಿನಾಂಕ : DATE 12/4/21

# ದಾಖಲೆಯ 7,584 ಸೋಂಕು ಪ್ರಕರಣಗಳು

## ನಗರದಲ್ಲಿ ಹಿಂದೆಂದಿಗಿಂತಲೂ ಅತಿ ಹೆಚ್ಚು ಕೊರೊನಾ ಸೋಂಕು ದೃಢ

[illegible] 12/4/21

**ಬೆಂಗಳೂರು:** ನಗರದಲ್ಲಿ ಹಿಂದೆಂದಿಗಿಂತಲೂ ಅತಿ ಹೆಚ್ಚು ಕೊರೊನಾ ಸೋಂಕು ಪ್ರಕರಣಗಳು ಭಾನುವಾರ ದಾಖಲಾಗಿದೆ. ಸೋಂಕು ನಿರಂತರ ಹೆಚ್ಚಳದಿಂದ ಸಕ್ರಿಯ ಸೋಂಕು ಪ್ರಕರಣಗಳು ಅರ್ಧ ಲಕ್ಷದ ಗಡಿದಾಟಿವೆ.

ನಗರದಲ್ಲಿ ಅತಿ ಹೆಚ್ಚು 5800 ಪ್ರಕರಣಗಳು ಪತ್ತೆಯಾಗಿದ್ದವು. ಆದರೆ, ಭಾನುವಾರ 7584ಕ್ಕೆ ಹೆಚ್ಚಳವಾಗಿದ್ದು 27 ಸೋಂಕಿತರು ಮೃತಪಟ್ಟಿದ್ದಾರೆ. ರಾಜ್ಯದ ಒಟ್ಟಾರೆ ಪ್ರಕರಣಗಳಲ್ಲಿ ಮುಕ್ಕಾಲು ಭಾಗ ಇಲ್ಲಿಯೇ ವರದಿಯಾಗಿವೆ. ಅಲ್ಲದೆ, ನಿರಂತರ ಸೋಂಕು ಅಧಿಕವಾದ ಹಿನ್ನಲೆ ಸಕ್ರಿಯ ಸೋಂಕಿತರ ಸಂಖ್ಯೆ 51,236ಕ್ಕೆ ಹೆಚ್ಚಳವಾಗಿದೆ. ಕಳೆದ ವರ್ಷ ಅಕ್ಟೋಬರ್‌ನಂತರ ಇದೇ ಮೊದಲ ಬಾರಿ ಸಕ್ರಿಯ ಪ್ರಕರಣಗಳು ಅರ್ಧ ಲಕ್ಷ ಗಡಿದಾಟಿವೆ. ಇನ್ನು ನಗರದ ಸೋಂಕು ಪರೀಕ್ಷೆಗಳು ಹಿಂದೆದಿಗಿಂತಲೂ ಅತಿ ಹೆಚ್ಚು ನಡೆದಿರುವುದೇ ಹೊಸ ಪ್ರಕರಣಗಳು ಇಷ್ಟೊಂದು ವರದಿಯಾಗಲು ಕಾರಣ ಎಂದು ಆರೋಗ್ಯ ಇಲಾಖೆ ಅಧಿಕಾರಿ ಹೇಳುತ್ತಾರೆ. ಒಟ್ಟಾರೆ ಸೋಂ ಕಿತರ ಪೈಕಿ 177 ಮಂದಿ ತುರ್ತು ನಿಗಾಘಟಕದಲ್ಲಿ, 6200 ಮಂದಿ ಆಸ್ಪತ್ರೆ, 1,570 ಮಂದಿ ಕೊರೊನಾ ಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ ಪಡೆ ಯುತ್ತಿದ್ದಾರೆ. ಬಾಕಿ 43 ಸಾವಿರ ಮಂದಿ ಮನೆಯಲ್ಲಿಯೇ ಆರೈಕೆಯಲ್ಲಿದ್ದಾರೆ.

**ಹಾಸಿಗೆ ಕೊರತೆ?:** ಸೋಂಕು ಹೆಚ್ಚಳವಾದ ಹಿನ್ನಲೆ ನಗರದ ಆಸ್ಪತ್ರೆಗಳಲ್ಲಿ ಹಾಸಿಗೆ ಸಮಸ್ಯೆ ತಲೆದೂರುವ ಸಾಧ್ಯತೆಗಳಿವೆ. ಭಾನುವಾರ ರಾತ್ರಿ ನಗರದ ವೈದ್ಯಕೀಯ ಕಾಲೇಜಿನಲ್ಲಿ ಮೀಸಲಿಟ್ಟ 380 ಹಾಸಿಗೆ ಪೈಕಿ ಕೇವಲ ಮೂರು , ಸರ್ಕಾರಿ ಆಸ್ಪತ್ರೆಯಲ್ಲಿ 872 ಪೈಕಿ 69, ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ 947 ಪೈಕಿ 162, ಖಾಸಗಿ ಆಸ್ಪತ್ರೆಯಲ್ಲಿ 705 ಪೈಕಿ 384 ಹಾಸಿಗೆಗಳು ಮಾತ್ರ ಖಾಲಿ ಇವೆ. ಒಟ್ಟಾರೆ 60 ವೆಂಟಿಲೇಟರ್ ಹಾಸಿಗೆಗಳು ಮಾತ್ರ ಲಭ್ಯವಿದೆ. ಸದ್ಯ 14 ಸರ್ಕಾರಿ, 17 ಖಾಸಗಿ, ಎರಡು ವೈದ್ಯಕೀಯ ಕಾಲೇಜಿನಲ್ಲಿ ಮಾತ್ರ ಕೊರೊನಾ ಚಿಕಿತ್ಸೆ ನೀಡುತ್ತಿದ್ದು ಆಸ್ಪತ್ರೆ ಮತ್ತು ಅಲ್ಲಿನ ಹಾಸಿಗಳ ಪ್ರಮಾಣ ಹೆಚ್ಚಿಸಬೇಕಿದೆ.



ಕೊರೊನಾ ಸೋಂಕಿತರ ಹಾಸಿಗೆ
(ಸರ್ಕಾರಿ ಕೋಟಾ)

| ಆಸ್ಪತ್ರೆಗಳು | ಮೀಸಲು | ಭರ್ತಿ | ಲಭ್ಯ |
|---|---|---|---|
| ಸರ್ಕಾರಿ ವೈದ್ಯಕೀಯ ಕಾಲೇಜು | 380 | 377 | 3 |
| ಸರ್ಕಾರಿ ಆಸ್ಪತ್ರೆ | 872 | 803 | 69 |
| ಖಾಸಗಿ ವೈದ್ಯಕೀಯ ಕಾಲೇಜು , | 947 | 785 | 162 |
| ಖಾಸಗಿ ಆಸ್ಪತ್ರೆ | 705 | 321 | 384 |
| ಕೊರೊನಾ ಕೇರ್ ಸೆಂಟರ್ | 578 | 448 | 130 |
| ಒಟ್ಟು | 3,482 | 2,734 | 748 |

(ಖಾಸಗಿಯಲ್ಲಿ 5000ಕ್ಕೂ ಅಧಿಕ ಮಂದಿ ಸ್ವಂತ ಖರ್ಚಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.)

# ಲಸಿಕಾ ಉತ್ಸವಕ್ಕೆ ಗೋಪಾಲಯ್ಯ ಚಾಲನೆ

**ಬೆಂಗಳೂರು:** ಮಹಾಲಕ್ಷ್ಮೀ ಲೇಔಟ್ ವಿಧಾನ ಸಭಾ ಕ್ಷೇತ್ರದ ಶಂಕರ ಮಠದ ಎಂ.ಜಿ. ನಗರ ಕಾಲೋನಿಯ ಒಲೇಟಿ ಬಹು ಮಹಡಿ ಕಟ್ಟಡದಲ್ಲಿ ಭಾನುವಾರದಿಂದ ಏ.14 ರ ವರೆಗೂ ನಡೆಯುವ ಕೋವಿಡ್ ಲಸಿಕಾ ಉತ್ಸವಕ್ಕೆ ಅಬಕಾರಿ ಸಚಿವ ಕೆ. ಗೋಪಾಲಯ್ಯ ಚಾಲನೆ ನೀಡಿದರು.

ವೈದ್ಯರ ಸಲಹೆಯಂತೆ ಮಹಾಲಕ್ಷ್ಮೀ ಲೇಔಟ್ ಕ್ಷೇತ್ರದ ಲಸಿಕೆ ವಿತರಣಾ ಕಾರ್ಯವನ್ನು ತೀವ್ರಗೊಳಿಸಿ ಕೊರೊನಾ ನಿರ್ಮೂಲನೆ ಮಾಡಬೇಕು ಎಂದರು.

ಹೆಚ್ಚು ಹೆಚ್ಚು ಸಾರ್ವಜನಿಕರಿಗೆ ಲಸಿಕೆ ಹಾಕಿಸಿ ಮತ್ತು ಅದರ ಬಗ್ಗೆ ಮಾಹಿತಿ ನೀಡಿ ಎಲ್ಲರಲ್ಲಿ ವಿಶ್ವಾಸ ಮೂಡಿಸುವ ಮೂಲಕ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಆರೋಗ್ಯ ಇಲಾಖೆಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು ಜನರನ್ನು ಲಸಿಕೆ ಕೇಂದ್ರಕ್ಕೆ ಕರೆ ತಂದು ಡೋಸ್ 1, ಡೋಸ್ 2 ಹಾಕಿಸಬೇಕು ಎಂದು ತಿಳಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಾರ್ಗ ಸೂಚನೆ ಅನ್ವಯ ಕೆಲಸ ನಿರ್ವಹಿಸುವ ಮೂಲಕ ಉತ್ತಮ ಹಾಗೂ ಆರೋಗ್ಯಕರ ಸಮಾಜಕ್ಕೆ ಹಾಗೂ ಸರ್ಕಾರಕ್ಕೆ ಸಹಕಾರ ನೀಡಬೇಕು ಎಂದು ಹೇಳಿದರು. ಸ್ಥಳೀಯ ಮುಖಂಡರಾದ ಜಯರಾಮಣ್ಣ, ಶ್ರೀನಿವಾಸ್, ಬಿ.ಎಂ. ರೈಲ್ವೆನಾರಾಯಣ, ಶ್ರೀನಿವಾಸ್, ಮಂಜುನಾಥ್, ಅವಿನ್ ಆರಾಧ್ಯ, ಬಿಬಿಎಂಪಿ ಆರೋಗ್ಯಾಧಿಕಾರಿ ಮಂಜುಳಾ ಇತರರು ಇದ್ದರು.